## ▸▸ ಗೇರು ಕ್ಷೇತ್ರೋತ್ಸವ, ಗೇರು ಬೆಳೆಗಾರರ ಸಮಾವೇಶ

# ಗೇರು ಕೃಷಿಯತ್ತ ಜನರನ್ನು ಸೆಳೆಯುವ ಪ್ರಯತ್ನ ಅಗತ್ಯ

**ನಗರ** ಡಿ. 15: ಗೇರು ಬೀಜಕ್ಕೆ ಯಾವತ್ತೂ ಬೇಡಿಕೆ ಇದೆ. ಈ ನಮ್ಮ ದೇಶದಲ್ಲಿ ಬೇಡಿಕೆಯಷ್ಟು ಗೇರು ಉತ್ಪಾದನೆ ಆಗುತ್ತಿಲ್ಲ, ಈ ನಿಟ್ಟಿನಲ್ಲಿ ಗೇರು ಕೃಷಿಯತ್ತ ಜನರನ್ನು ಸೆಳೆಯುವ ಪ್ರಯತ್ನ ಆಗಬೇಕು ಎಂದು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ನೆಟಾಲ್ಕರ್ ಹೇಳಿದರು.



ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶ್ ನೆಟಾಲ್ಕರ್ ಮಾತನಾಡಿದರು.

ಮೊಟ್ಟೆತ್ತಡ್ಕ ಗೇರು ಸಂಶೋಧನಾ ನಿರ್ದೇಶನಾಲಯದಲ್ಲಿ ಡಿ. 14ರಂದು ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ವತಿಯಿಂದ ನಡೆದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ಒಂದು ದಿನದ ಗೇರು ಕ್ಷೇತ್ರೋತ್ಸವ ಮತ್ತು ಗೇರು ಬೆಳೆಗಾರರ ಸಮಾವೇಶದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಈ ವರ್ಷದಿಂದ ಜಾರಿಗೆ ಬಂದಿದೆ. ಇದರಲ್ಲಿ ಗೇರು ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡಲಾಗುತ್ತದೆ. 3 ಲಕ್ಷ ಗೇರು ಸಸಿಗಳನ್ನು ತಯಾರಿಸಿ ರೈತರಿಗೆ ನೀಡುವ ಯೋಜನೆ ಇದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಪುತ್ತೂರು ಡಿಸಿಆರ್ ನಿರ್ದೇಶಕ ಎಂ.ಜಿ. ನಾಯಕ್ ಮಾತನಾಡಿ, ಜನ ಈಗ ಆರ್ಥಿಕವಾಗಿ ಲಾಭ ಗಳಿಸುವ ಕೃಷಿಗೆ ಒತ್ತು ಕೊಡುತ್ತಿದ್ದಾರೆ. ವೈಜ್ಞಾನಿಕ ಗೇರು ಕೃಷಿಯ ಬಗ್ಗೆ ಜನರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮ ನಡೆಯಬೇಕು ಎಂದರು.

ಸಂಪನ್ಮೂಲ ವ್ಯಕ್ತಿಗಳಾದ ಪುತ್ತೂರು ಡಿಸಿಆರ್ ಹಿರಿಯ ವಿಜ್ಞಾನಿ ಮೋಹನ್, ಪ್ರಧಾನ ವಿಜ್ಞಾನಿ ಟಿ.ಎನ್. ರವಿಪ್ರಸಾದ್, ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಕುಂದಾಪುರ ವಿಭಾಗೀಯ ವ್ಯವಸ್ಥಾಪಕ ಉದಯ ಕುಮಾರ್ ಜೋಗಿ, ಪುತ್ತೂರು ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸುಬ್ರಹ್ಮಣ್ಯ ರಾವ್ ಉಪಸ್ಥಿತರಿದ್ದರು.

ಕೆಸಿಡಿಸಿ ಪುತ್ತೂರು ವಿಭಾಗ ವ್ಯವಸ್ಥಾಪಕ ಕಿಶೋರ್ ಕುಮಾರ್ ಸ್ವಾಗತಿಸಿದರು. ಕೆ. ಸುರೇಶ್ ಗೌಡ ವಂದಿಸಿದರು. ಡಿಸಿಆರ್ ತಾಂತ್ರಿಕ ಅಧಿಕಾರಿ ಪ್ರಕಾಶ್ ಭಟ್ ಕಾರ್ಯಕ್ರಮ ನಿರೂಪಿಸಿದರು. ಸಿಬಂದಿಗಳಾದ ರವಿಪ್ರಸಾದ್, ಸತ್ಯನಾರಾಯಣ ರೈ, ಶೀನಪ್ಪ ಗೌಡ ಸಹಕರಿಸಿದರು.